ಈ) ತಾಂತ್ರಿಕ ಪರಿಶೀಲನೆ ಪೂರ್ಣಗೊಂಡನಂತರ ವಿವರಗಳು ತಿಳಿದು ಬರುತ್ತವೆ.

ಸರ್ಕಾರಿ ನೌಕರರಿಗೆ ನೇಮಕಾತಿ ನಿರ್ಬಂಧವನ್ನು ತೆಗೆದುಹಾಕುವುದು.

377 - ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರಿ ನೌಕರರಿಗೆ ಇರುವ ನೇಮಕಾತಿ ನಿರ್ಬಂಧವನ್ನು ತೆಗೆದುಹಾಕುವ ಬಗ್ಗೆ ಸರ್ಕಾರವು ಆಲೋಚನೆ ಮಾಡಿದೆಯೇ?

ಆ) ಹಾಗಿದ್ದಲ್ಲಿ, ಎಂದಿನಿಂದ ಆ ಆಜ್ಞೆ ಜಾರಿಗೆ ಬರುತ್ತದೆ.

ಇ) ನೇಮಕಾತಿ ನಿರ್ಬಂಧವನ್ನು ಮುಂದುವರೆಸುವುದಾದರೆ ಅದಕ್ಕೆ ಕಾರಣಗಳೇನು? (ವಿವರಗಳನ್ನು ತಿಳಿಸುವುದು)?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ರಾಜ್ಯದಲ್ಲಿ ಆರ್ಥಿಕ ಮಿತವ್ಯಯದ ಕ್ರಮಗಳು ಜಾರಿಯಲ್ಲಿರುವುದರಿಂದ ನೇರ ನೇಮಕಾತಿ ಮಾಡಲು ನಿರ್ಬಂಧವನ್ನು ವಿಧಿಸಲಾಗಿದೆ.

ಶಹಬಾದಿನಲ್ಲಿರುವ ಹೆಚ್.ಎಂ.ಪಿ. ಸಿಮೆಂಟ್ ಕಾರ್ಖಾನೆಯ ಧೂಳಿನಿಂದ ತೊಂದರೆ.

378 ಶ್ರೀ ಬಾಬುರಾವ್ ಚವಾಣ್ (ಶಹಾಬಾದ್): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಹಾಬಾದ್‌ನಲ್ಲಿ ಇರುವ ಹೆಚ್.ಎಂ.ಪಿ. ಸೀಮೆಂಟ್ ಕಾರ್ಖಾನೆಯ ಧೂಳನ್ನು ಹೊರಗೆ ಹಾಕುತ್ತಿರುವುದರಿಂದ ಅಲ್ಲಿಯ ಜನರಿಗೆ ರೋಗ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದರಿಂದ ಸುತ್ತ ಮುತ್ತ ಇರುವ ಜಮೀನಿನಲ್ಲಿ ಬೆಳೆಗಳು ನಾಶವಾಗುತ್ತಿದ್ದು ಅದನ್ನು ತಡೆಯಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) ಬಂದಿದೆ.

ಆ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಶಹಾಬಾದ್‌ನಲ್ಲಿರುವ ಹೆಚ್.ಎಂ.ಪಿ. ಸಿಮೆಂಟ್ ಕಾರ್ಖಾನೆಯಿಂದ ಹೊರದೂಡುವ ಧೂಳು ನಿಗಧಿಪಡಿಸಿರುವ ಗುಣಮಾನಕ್ಕಿಂತ ಅತಿಯಾಗಿ ಮೀರಿರುವುದನ್ನು ಕಂಡುಬಂದ ನಂತರ ವಾಯು (ಮಾಲಿನ್ಯ ನಿವಾರಣ ಮತ್ತು ನಿಯಂತ್ರಣ) 1981 ಕಾಯ್ದೆಯ ಕಲಂ 31 (ಎ) ಪ್ರಕಾರ ಸದರಿ ಉದ್ದಿಮೆಯನ್ನು ಮುಚ್ಚುವಂತೆ ದಿನಾಂಕ 2-12-91ರಂದು ಆದೇಶ ನೀಡಿತು. ಈ ಆದೇಶದ ವಿರುದ್ಧ ಉದ್ದಿಮೆಯು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಒಂದು ರಿಟ್ ಅರ್ಜಿಯನ್ನು ಸಲ್ಲಿಸಿ ತಡೆಯಾಜ್ಞೆಯನ್ನು ಪಡೆಯಿತು. ಉಚ್ಚ ನ್ಯಾಯಾಲಯವು ಈ ಅರ್ಜಿಯನ್ನು ವಿಲೇವಾರಿ ಮಾಡುತ್ತ ದಿನಾಂಕ 1-6-92 ರಂದು ಈ ಕೆಳಕಂಡ ತೀರ್ಪು ನೀಡಿತು.

"ಉದ್ದಿಮೆಯು ನ್ಯಾಯಲಯದ ತೀರ್ಪಿನ ದಿನಾಂಕದಿಂದ ಆರು ವಾರದೊಳಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಭಾರತ ಸರ್ಕಾರದ ಪರಿಸರ